ಶ್ರೀ ಕೆ. ವಸಂತ ಬಂಗೇರ.—ಎಷ್ಟು ಸಮಯದಲ್ಲಿ ಈ ರಸ್ತೆಯ ನಿರ್ಮಾಣದ ಕೆಲಸವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ಪರಿಶೀಲಿಸುತ್ತೇವೆ ಎಂದ ಮೇಲೆ ಸಮಯ ಹೇಳುವುದಕ್ಕಾಗುವುದಿಲ್ಲ.

ಮಹಾರಾಷ್ಟ್ರದ ದೂಧ್‌ಗಂಗಾ ಯೋಜನೆ

೧೯೨೭. ಶ್ರೀ ವೀರಕುಮಾರ್ ಎ. ಪಾಟೀಲ್ (ನಿಪ್ಪಾಣಿ) — ಪೂರ್ಣ ಕೃಷ್ಣಾ ಯೋಜನೆ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಹಾರಾಷ್ಟ್ರ ರಾಜ್ಯದ ಕಳಮವಾಡಿ ಬಳಿ ನಿರ್ಮಾಣವಾಗುತ್ತಿರುವ ದೂಧ್ ಗಂಗಾ ಯೋಜನೆಯಲ್ಲಿ ರಾಜ್ಯದ ಪಾಲು ಎಷ್ಟು?

ಆ) ಹಾಗಿದ್ದರೆ ಇದುವರೆಗೆ ಆ ಬಿಡುಗಡೆಗಿರುವ ಹಣವೆಷ್ಟು ?

ಇ) ನಮ್ಮ ರಾಜ್ಯದಲ್ಲಿ ಕಾಲುವೆ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನೆ ಮತ್ತು ನೀರಾವರಿ ಮಂತ್ರಿಗಳು).—

ಅ) ಯೋಜನೆಯ ಖರ್ಚಿನಲ್ಲಿ ನಮ್ಮ ರಾಜ್ಯದ ಪಾಲು ಎಷ್ಟು ಎಂಬುದು ಎರಡೂ ರಾಜ್ಯಗಳ ನಡುವೆ ಇನ್ನೂ ಪರಿಶೀಲನೆಯಲ್ಲಿದೆ.

ಆ) ಮಹಾರಾಷ್ಟ್ರ ಸರ್ಕಾರವು ಕರ್ನಾಟಕ ಸರ್ಕಾರದ ಭಾಗವಾದ ೭೭೫.೯೨ ಲಕ್ಷ ರೂ.ಗಳನ್ನು ಬಿಡುಗಡೆ ಮಾಡುವಂತೆ ಕೋರಿದುದಕ್ಕೆ ಎದುರಾಗಿ, ಅಂತಿಮ ನಿರ್ಧಾರವನ್ನು ಕಾದು, ೨೦೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಪರಿಷ್ಕೃತ ಅಂತಿಮ ಕಾಲುವೆಯ ತಳ ಮಟ್ಟವನ್ನು ಕರ್ನಾಟಕ ಸೀಮೆವರೆಗೆ ಮಹಾರಾಷ್ಟ್ರ ಸರ್ಕಾರದವರು ಒದಗಿಸಿದ ನಂತರ ಅಂತಿಮ ಸರ್ವೆ ಕೆಲಸವನ್ನು ತೆಗೆದುಕೊಳ್ಳಲಾಗುವುದು.

SRI VEERAKUMAR. A. PATIL.— Regarding this project, the Maharashtra agriculturists are getting banefit but our Government has contributed only Rs. 2 Crores when they have asked for Rs. 775.92 lakhs. I request the Government to contribute some more funds to the Maharashtra Govt. so that they will atleast start the canal in our State.

SRI S. R. BOMMAI.— The correspondence and discussion between Karnataka Government and Maharashtra Govt. have taken place. No final decision has been taken. Meanwhile, we have released Rs. 2 Crores. As and when necessary, we will release the funds and Karnataka farmers will get the benefit.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಮತ್ತು ಬೆಳಗಾಂ ಜಿಲ್ಲೆಯಲ್ಲಿ ಇದು ಮಹತ್ವವಾದ ಒಂದು ಯೋಜನೆ. ಈ ಯೋಜನೆಗೆ ಮಹಾರಾಷ್ಟ್ರ ಸರ್ಕಾರದವರು ಹಣ ಬಿಡುಗಡೆ ಮಾಡಿಲ್ಲವೆಂದು ಆದ್ದರಿಂದ ಕೆಲಸ ಮಾಡುವುದಕ್ಕಾಗಲಿಲ್ಲವೆಂದು ಹೇಳಿರುವುದು ಸರಿಯಲ್ಲ. ಆಮೇಲೆ, ಈ ಕೆಲಸಕ್ಕಾಗಿ ೨ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆಯೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದರೆ, ೧ ಕೋಟಿ ರೂಪಾಯಿಗಳನ್ನು ಮಾತ್ರ ನಮ್ಮ ಸರ್ಕಾರ ಬಿಡುಗಡೆ ಮಾಡಿದೆ. ಇದರಲ್ಲಿ ಯಾವುದು ಸತ್ಯ ಯಾವುದು ಅಸತ್ಯ ಎಂಬುದನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಇದು ಅಂತರ ರಾಜ್ಯ ಯೋಜನೆಯಾಗಿದೆ, ಈ ಯೋಜನೆಯಿಂದ ನೀರಾವರಿ ಮತ್ತು ವಿದ್ಯುಚ್ಛಕ್ತಿ ಎರಡನ್ನೂ ಉತ್ಪತ್ತಿ ಮಾಡತಕ್ಕ ವಿಚಾರ ಇದರಲ್ಲಿ ಇದೆ. ಇದರ ಬಗ್ಗೆ ಮಹಾರಾಷ್ಟ್ರ ಸರ್ಕಾರದೊಡನೆ ನಾವು ಪತ್ರ ವ್ಯವಹಾರ ಮಾಡಿದ್ದೇವೆ. ಮತ್ತು ಅಂಶಿಮವಾದ ಸಲಹೆಯನ್ನು ಮಹಾರಾಷ್ಟ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅದರಿಂದ ಇನ್ನೂ ಉತ್ತರ ಬರಬೇಕಾಗಿದೆ. ಉತ್ತರ ಬಂದ ಮೇಲೆ ಅಗ್ರಿಮೆಂಟ್ ಮಾಡಿಕೊಂಡು ಹಣವನ್ನು ಬಿಡುಗಡೆ ಮಾಡುತ್ತೇವೆ. ರೈತರ ಹಿತದೃಷ್ಟಿಯಿಂದ ಈಗಾಗಲೇ ಎರಡು ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಅಗ್ರಿಮೆಂಟ್ ಆದ ಮೇಲೆ ಎಷ್ಟು ಹಣ ಬಿಡುಗಡೆ ಮಾಡಬೇಕಾಗಿ ಬರುತ್ತದೆಯೋ ಅಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್.— ಕರ್ನಾಟಕ ರಾಜ್ಯದಲ್ಲಿ ಬರತಕ್ಕ ಕೆನಾಲ್‌ಗಳನ್ನು ಬೇಗ ಮಾಡದೇ ಹೋದರೆ ನೀರನ್ನು ಪೂರೈಕೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಕೆನಾಲ್‌ಗಳನ್ನು ಮಾಡುವುದಕ್ಕೆ ಏನು ಕಾರ್ಯಕ್ರಮ ಹಾಕ ಕೊಳ್ಳುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಆದರ ಬಗ್ಗೆ ಕೆಲಸ ಮಾಡಿದ್ದೇವೆ.

Alignments to subways and cross-sections are completed for the embankment 34.34 Kms.

excavation along with canal, fixing of stones, are completed.

Alignment survey and cross-section surveys are completed for the embankment 37.34 kms, out of total length of 59 kms and works in the remaining Kms are in progress.

ಬಿಜಾಪುರ ಜಿಲ್ಲೆಯ ಮುಳವಾಡದಲ್ಲಿ ಏತ ನೀರಾವರಿ ಯೋಜನೆ

೨೩೩೮. ಶ್ರೀ ಎಂ. ಎಲ್. ಉಸ್ತಾದ್,(ಬಿಜಾಪುರ).—ಮಾನ್ಯ ಸಣ್ಣ ಹಾಗೂ ಏತ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯ ಏತ ನೀರಾವರಿ ಯೋಜನೆಗೆ ಮುಖ್ಯ ಮಂತ್ರಿಗಳು ಶಂಖು ಸ್ಥಾಪನೆ ಮಾಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಈ ಯೋಜನೆಗೆ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆಯೇ ?

ಇ) ಈ ಯೋಜನೆಗೆ ನಿಗದಿತವಾದ ಹಣ ?

ಈ) ಇಲ್ಲಿಯವರೆಗೆ ಸಾಧಿಸಿದ ಪ್ರಗತಿ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು).—

ಅ) ಹೌದು

ಆ) ಮುಳವಾಡ ಏತ ನೀರಾವರಿ ಯೋಜನೆಯು ಹೆಡ್‌ವರ್ಕ್ಸ್‌ಗಳನ್ನೊಳಗೊಂಡ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ೧೦೭೧.೧೦ ಕೋಟಿ ರೂ.ಗಳ ಪರಿಷ್ಕೃತ ಅಂದಾಜಿಗೆ, ಮುಖ್ಯ ಇಂಜಿನಿಯರ್, ಕೃಷ್ಣಾ ಮೇಲ್ದಂಡೆ ಯೋಜನೆ ಆಲಮಟ್ಟಿ, ಇವರು ಜನವರಿ ೧೯೮೮ರಲ್ಲಿ ತಾಂತ್ರಿಕ ಮಂಜೂರಾತಿ ನೀಡಿದ್ದಾರೆ.

ಇ) ಮುಳವಾಡ ಏತ ನೀರಾವರಿ ಯೋಜನಾ ವರದಿಯು ತಯಾರಾದ ನಂತರ ನಿಗದಿ ಪಡಿಸ ಬೇಕಾದ ಹಣವನ್ನು ನಿರ್ಧರಿಸಲಾಗುವುದು.

ಈ) ಹೆಡ್‌ವರ್ಕ್ಸ್‌ಗಳ ನಿರ್ಮಾಣ ಸ್ಥಳವು ನಿಷ್ಕರ್ಶಿತವಾಗಿದ್ದು ಹೆಚ್ಚಿನ ಸಮೀಕ್ಷಾ ಕಾರ್ಯವು ಪ್ರಗತಿಯಲ್ಲಿದೆ.